ಇನ್ನೊಂದು ಅಗ್ದಿ ಮಜಾ ಸಂಗ್ತಿ ಅಂದ್ರ, ಸತ್ತೋರಿಗೆ ಸರಿ ಹೋದ್ರು ಅನ್ನೂದು. ಅವೊತ್ತೊಂದಿವ್ಸ ನನ್ನ ಗೆಳತಿ ಶುಭಾ ಮೂರು ದಿನಾ ಆದಮ್ಯಾಲೆ ಸಾಲೀಗೆ ಬಂದಿದ್ಲು. ಅವರಜ್ಜಿಗೆ ಅರಾಮಿಲ್ಲ ಅನ್ನೂದು ಎಲ್ಲಾರಿಗೂ ಗೊತ್ತಿದ್ದ ಸಂಗ್ತಿನ. ಆದ್ರ ಅವೊತ್ತು ಮಾರಿ ಇಟೇ ಈಟು ಮಾಡ್ಕೊಂಡು ಬಂದಿದ್ಲು. 'ಏನಾತ ಶುಭಾ... ನಿಮ್ಮಜ್ಜಿ ಅರಾಮದಾರ ಹೌದಿಲ್ಲೋ...?' ಅಂತ ಕೇಳಿದೆ. ಅಕಿ ಸಣ್ಣ ಧ್ವನಿ ಮಾಡ್ಕೊಂಡು ಅವರು 'ಸರಿ ಹೋದ್ರು' ಅಂದ್ಲು. ನಾನು ಸಲಗೀಲೆ, ಬೆನ್ನ ಮ್ಯಾಲೆ ಹೊಡದು, ಛೊಲೊ ಆತು ಬಿಡು. ಅವರು ಸರಿಹೋದ್ರು ಅಂದ್ರ ಇನ್ನೇನೂ ಚಿಂತಿ ಇರೂದಿಲ್ಲ. ನಿಮ್ಮಮ್ಮಗೂ, ನಿಂಗೂ... ಇನ್ನೇನು ಊಟಾ ಮಾಡು. ಅರಾಮಿರೂದ ಅಂದೆ.

ಅಕಿನ್ನ ಕಣ್ಣಾಂದ ದಳದಳದಳ ಹನಿ ನೀರು ಉರುಳಾಕತ್ತುವು. ಅಕಿ ಅತ್ತಿದ್ದ ಫೋರ್ಸ್ ನೋಡಿದ್ರ ತಮಿಳುನಾಡು ಸೈತ ನೀರು ಸಾಕು ಅಂತಿತ್ತು... ಹಂಗ ಕಣ್ಣೀರು ಸುರದ್ಲು. ಇಡೀ ಸಾಲ್ಯಾಗ ನಾ ಅವೊತ್ತು ವಿಲನ್ ಜಾಗದಾಗ ನಿಂತಿದ್ದೆ. ಶುಭಾನ ಅಜ್ಜಿ ಸರಿ ಹೋದ್ರು ಅಂದ್ರ ಇಕಿಗೆ ಖುಷಿ ಆತು ಅಂತ ಎಲ್ಲಾ ಕಡೆ ಮಾತು ಅಥವಾ ಯಾರೇ ಮಾತಾಡಿದ್ರೂ ಅವರು ಅದನ್ನೇ ಮಾತಾಡ್ತಾರ ಅಂತ ಅನಸಾಕ ಸುರು ಆಗಿತ್ತು. ಈ ಗೊಂದಲ ಬಗಿ ಹರದಿದ್ದು ಹಿಂದಿಯಿಂದ. ಸರಿಹೋದ್ರು ಮತ್ಲಬ್ ಮರಗಯೆ! ಅಂತ ಹೇಳಿದಾಗಲೇ!

ಸಾಯೂದು. ಸಾಯಸೂದು ಇಲ್ಲಿಗೇ ಮುಗಿಯೂದಿಲ್ರಿ. 'ಕೊಲ್ಲೆ ಹೋಗಿದ್ದ' ಅಂತ ಕಸಾ ಬಳಿಯೂ ಭಾರ್ತಿ ಹೇಳ್ದಾಗ ಬೆಚ್ಚಿ ಬಿದ್ದಿದ್ದೆ. ಯಾರಿಗೆ ಕೊಂದು ಬಂದ್ಲು? ಕೊಲ್ಲಿದ್ದು ಯಾರಿಗೆ? ಅನ್ನೂ ಪ್ರಶ್ನೆ ಕಣ್ಣಾಗ ತುಂಬ್ಕೊಂಡ್ರ ಪ್ರಶ್ನೆಗಳನ್ನೆಲ್ಲ ಹಣಿ ಗಂಟ್ನಾಗ ಕೇಳಿದ್ದೆ. 'ಕೊಲ್ಲಿರಿ... ಕೊಲ್ಲೇ ಅದ... ಗುಡಿ ನಮ್ಮನಿಬಲ್ಲಿ. ಅಲ್ಲಿಂದೇ ಬಂದಿದೆ, ಕೊಲ್ಲಿ ಗುಡಿ ಕಾಣರ್ತದ ನೋಡ್ರಿ' ಅಂದಾಗ ನಿಟ್ಟುಸಿರು ಬಿಟ್ಟಿದ್ದೆ. ಅಲ್ಲೇ ಅನ್ನಾಕ ಕೊಲ್ಲಿ ಅಂತ ಹೇಳಿದ್ಲು. ಬೀದರ್‌ನಾಗ ಹಂಗೇ ನೋಡ್ರಿ. ಕಲ್ಯದ ಅಂದ್ರ ಅಲ್ಯದ ಅಂತ ಅರ್ಥ.

ಇನ್ನೊಮ್ಮೆ ನನ್ನ ಮಗಳನ್ನ ಎತ್ಕೊಂಡು ಪರಿಚಯದವರ ಮನೀಗೆ ಹೋಗಿದ್ದೆ. ಇದಕ್ಕ ಹಶಿವಿ ಆಗಿತ್ತೋ, ತನಗ್ಯಾರೂ ನೋಡವಲ್ರು ಅನ್ನೂ ಸಂಕಟ ಕಾದಿತ್ತೋ ಗೊತ್ತಿಲ್ಲ... ಒಟ್ನಾಗ ಅಳಾಕ ಸುರು ಮಾಡಿದ್ಲು. ಸೂರು ನನಗೇ ನುಂಗುಹಂಗ ನೋಡಾಕತದ ಅನಸೂವಷ್ಟು ಜೋರೆಗೆ ಅಳಾಕತ್ತಿದ್ಲು. ಆ ಮನೀ ಯಜಮಾನ್ತಿ 'ಯಾಕೇ ಮಗಾ... ಅಳ್ತಿ... ಏನ್ಬೇಕು? ಹಾವು ಬೇಕು... ಹಾವು ತರ್ಲಿ... ಬೆಚ್ಚಂದ ತರ್ಲಿ, ಥಣ್ಣಂದ ತರ್ಲಿ?' ಅಂದಾಗ ನನ್ನ ಮೈ ಹಾವಿನ್ಹಂಗೇ ತಣ್ಣಗ ಕೊರಿಯುವಷ್ಟು ಥಣ್ಣಗ ಆಗಿದ್ದೆ. ಕೂಸಿಗೆ ಹಾವು ತಂದು ಕೊಡೂದಂದ್ರೇನು? ಬೆಚ್ಚಂದಾ, ತಣ್ಣಂದಾ ಅಂದ್ರೇನು? ಚೇನಾಗೀನಾ ಇಲ್ಲೇ ಐತೇನಪ್ಪಾ... ಹಾವು ಹಲ್ಲಿ ಎಲ್ಲಾ ಬಿಸಿ ಮಾಡಿ ಕೊಡ್ತಾರೇನು ಅಂತ ಗಾಬರಿ ಆಗಿದ್ದೆ. ಒಂದು ಸಣ್ಣ ಗ್ಲಾಸಿನಾಗ ಹಾಲು ತಂದು ಕೊಟ್ಟಾಗಲೇ ನಿರಾಳ ಆಗಿದ್ದು. ನೀರಿಗೆ 'ಮಾ' ಅನ್ನೂದು ಅಲ್ಲೇ ಕಲ್ತಿದ್ದೆ.

ಈಗಲೂ ಬೀದರ್‌ಗ ಹೋದ್ರ ಕನ್ನಡ ಕೇಳಿ ಖುಷಿ ಪಡ್ತೇನಿ. ಯಾಕಂದ್ರ ಅಲ್ಲಿನ್ನಾ ಹೈಬ್ರಿಡ್ ಕನ್ನಡ ಬಂದಿಲ್ಲ. ಪ್ರತಿ ವಾಕ್ಯದೊಳಗೂ ಬಟ್, ಸೋ, ಬಿಕೌಸ್, ಆ್ಯಕ್ಚುಲಿ ಅನ್ನುವ ಪದಗಳೆಲ್ಲ ನುಸುಳುಖೋರರಾಗಿ ಭಾಷೆಯ ಅಂದ ಕೆಡಿಸಿಲ್ಲ. 'ಭಿ' ಅನ್ನೂ ಪದಕ್ಕೆ ಪರ್ಯಾಯವಾಗಿ 'ಬಟ್' ಬಂದು ಕುಂತಿಲ್ಲ. ಅದರ ಸಲ್ಯಾಂದೇ ಅಂತ ಹೇಳ್ತಾರ ಅಲ್ಲಿ... ಮಾತಿನ ನಡು ಇನ್ನಾ 'ಸೊ' ಬಂದಿಲ್ಲ. ಹಂಗಾಗಿ ಕನ್ನಡ ಕೇಳಬೇಕಂದ್ರ ಅಲ್ಲೇ ಹೋಗ್ಬೇಕು ನೋಡ್ರಿ. ಬೀದರ್‌ನೋರು ಕರೀತಾರ... ನಾನೂ ಅವರಿಗೆ ಹೇಳ್ತೇನಿ... 'ನಾ ಹೊಂಟಿದೆ'.